ಹಾಲು–ತುಪ್ಪ ಎಂದೆಲ್ಲಾ ಪಕ್ಕದಲ್ಲಿ ಗಂಗಕ್ಕನಿಂದಲೇ ಕೊಳ್ಳುತ್ತಿದ್ದರೇನೋ. ಈಗ ಊರಿನಲ್ಲಿ ಬೇರೆಲ್ಲೋ ವ್ಯವಸ್ಥೆ ಮಾಡಿಕೊಂಡಿದ್ದರು. ಆದರೆ ಈ ಬಾರಿಗೆ ಬೇಸಿಗೆ ವಿಪರೀತವಾಗಿ ಬಾವಿಯ ನೀರು ತಳಕ್ಕಿಳಿದಿತ್ತು. ಹಾಗಾಗಿ ಬಾಣಂತಿ–ಶಿಶುವಿಗೆ ಬೇಕಾದಷ್ಟು ನೀರು ಹೊಂದಿಸಲು ಸ್ವಲ್ಪ ಪರದಾಡಬೇಕಾಗಿದ್ದು ಬಿಟ್ಟರೆ, ಉಳಿದಂತೆ ಎಲ್ಲವೂ ಸಾಂಗವಾಗಿ ನಡೆದಿತ್ತು... ಅಂದು ಮಾರ್ಬಲ ರಾಯರ ಪಿತ್ತ ಕೆರಳುವವರೆಗೆ.

ಹಲಸಿನ ಹಣ್ಣಿನ ದಿನಗಳಾದ್ದರಿಂದ, ಊರಲ್ಲಿ ಎಲ್ಲೆಲ್ಲಾ ಹಲಸಿನ ಕಾಯಿ ಬೆಳೆದಿದೆಯೋ ಅಲ್ಲಿಂದೆಲ್ಲಾ ತಂದು ಹಪ್ಪಳ–ಸಂಡಿಗೆ ಮಾಡಿ ಮಾರಾಟ ಮಾಡುವುದು ಗಂಗೆ–ತುಂಗೆಯರ ಮಾಮೂಲಿ ಕಾಯಕ. ಈ ಬಾರಿಯೂ ಅದನ್ನೇ ಮಾಡುತ್ತಿದ್ದರು. ಕಾಯಿ ಮತ್ತು ಹಣ್ಣುಗಳ ತ್ಯಾಜ್ಯವನ್ನು ಅವರು ಗೊಬ್ಬರಗುಂಡಿಗೆ ಸುರಿಯುತ್ತಿದ್ದಂತೆ ಒಂದಿಷ್ಟು ಹಕ್ಕಿಗಳ ದಂಡು ಮುತ್ತುತ್ತಿತ್ತು. ಅದೂ ಮಾಮೂಲಿಯೆ, ಹೊಸತೇನಿಲ್ಲ. ಆದರೆ ಹಾಗೆ ಮುತ್ತಿದ ಹಕ್ಕಿಗಳಿಗೆ ಪಕ್ಕದ ಅಂಗಳಲ್ಲಿ ಯಾವತ್ತೂ ಕಾಣಿಸದ ಶಿಶುವಿನ ಬಟ್ಟೆಗಳು ಕಣ್ಣಿಗೆ ಬಿದ್ದವು. ಅದೇನೆಂಬ ಕುತೂಹಲಕ್ಕೆ ಬಟ್ಟೆ ಒಣಗಿಸಿದ ತಂತಿಯ ಮೇಲೆ ಕೂತ ಹಕ್ಕಿಗಳಿಂದ ಕೂಸಿನ ವಸ್ತ್ರಗಳೆಲ್ಲಾ ಕೊಳೆಯಾಗಿದ್ದವು. ಮೊದಲೊಂದೆರಡು ಬಾರಿ ಬಟ್ಟೆಗಳು ಹೀಗೇಕಾದವು ಎಂದು ಅಂದಾಜಾಗದ ಕುಸುಮಕ್ಕ ಮತ್ತೆ ಒಗೆದು ಒಣಗಿಸಿದರು. ಮೊದಲೇ ನೀರಿಗೆ ಸಮಸ್ಯೆ, ಅದರಲ್ಲೂ ಮತ್ತೆ ಮತ್ತೆ ಒಗೆಯಬೇಕು ಎಂದರೆ? ಆದರೆ ಸಮಸ್ಯೆಯ ಮೂಲ ಏನೆಂದು ಪತ್ತೆ ಹಚ್ಚಿದ ಮೇಲೆ ಅವರು ಗಂಡನಿಗೆ ಹೇಳಲೇಬೇಕಾಯ್ತು. ಮತ್ತೆ ಕೆರಳಿತಲ್ಲ ಪಿತ್ತ ರಾಯರದ್ದು!

"ಎಂಥಾ ಶನಿಕಾಟಕ್ಕಾದ್ರೂ ಶಾಂತಿ ಮಾಡ್ಸಲ್ಲಾಗ್ತಡ. ಈ ಅತ್ತೆ–ಸೊಸೆ ಕಾಟ ಅದ್ರಕ್ಕಿಂತಲೂ ಹೆಚ್ಚಾತಲಿ. ಮೊದ್ಲೇ ನೀರಿಗೆ ತತ್ವಾರ. ಈಗ ದುರ್ಭಿಕ್ಷದಲ್ಲಿ ಅಧಿಕ ಮಾಸದಂಗೆ ಮತ್ತೆ ಮತ್ತೆ ವಸ್ತ್ರ ತೊಳಿಯವ್ವು ಅಂದ್ರೆ ಹುಡುಗಾಟವಾ? ಇವತ್ತೊಂದು ಗತಿ ಕಾಣಿಸ್ತಿ" ಎಂದು ಸಿಡುಕುತ್ತಾ ಪಂಚೆ ಕಟ್ಟಿಕೊಂಡು ಬಂದ ರಾಯರು, "ಏ ಗಂಗೆ! ಇವತ್ತು ನಿಮ್ಮನೆ ಗೊಬ್ರ ಗುಂಡಿ ಮುಚ್ಚದಿದ್ರೆ ಅಪ್ಪಂಗೆ ಹುಟ್ಟಿದ ಮಗ ಆನಲ್ಲ! ಯಾರು ಬಂದು ತಡೀತ ನೋಡೇ ಬಿಡ್ತಿ. ಬರ್ಲಿ ದಮ್ಮಿದ್ದೋರು" ಎಂದು ಆರ್ಭಟಿಸುತ್ತಾ ಕೈಯಲ್ಲೊಂದಿಷ್ಟು ಹತಾರಗಳೊಂದಿಗೆ ಮುನ್ನುಗ್ಗಿದರು. ಏನು ಮಾಡಬೇಕೆಂದು ಅರಿಯದೆ ದೊಡ್ಡ ಕೋಲೊಂದನ್ನು ಹಿಡಿದು ಗಂಗಕ್ಕನೂ ಗೊಬ್ರಗುಂಡಿಯತ್ತ ಓಡಿದಳು. ಅವಳನ್ನು ಕಾಣುತ್ತಿದ್ದಂತೆಯೇ ಮತ್ತೂ ಆವೇಶ ಬಂದಂತಾದ ರಾಯರು ತಮ್ಮ ಹೆಜ್ಜೆ ಎತ್ತಿ ಇಡುವಲ್ಲೇನಿದೆ ಎಂದು ಪರಿಕಿಸದೆ ಮುನ್ನುಗ್ಗಿದ್ದಷ್ಟೆ ನೇರ ಗೊಬ್ಬರ ಗುಂಡಿಯೊಳಗೆ ಬಿದ್ದು ಕಣ್ಣೆವೆ ಇಕ್ಕುವಷ್ಟರಲ್ಲಿ ಕಂಠಮಟ್ಟ ಹುಗಿದು ಹೋದರು!

ಕೂಗಲೂ ಆರದೆ, ಕೂಗದುಳಿಯಲೂ ಆರದೆ ದಿಗ್ಮೂಢರಾಗಿದ್ದ ಅವರತ್ತ ದಾಪುಗಾಲಿಟ್ಟ ಗಂಗಕ್ಕ, "ಎಲ್ರೂ ಸತ್ಮೇಲೆ ಹೋಪದು ಗೊಬ್ರಗುಂಡಿಗೇಯ. ನೀನು ಇದ್ದಾಗ್ಲೇ ಬಿದ್ದು ಪಾಪ ತೊಳಕಂಡೆ ಮಾಬ್ಲ. ಕೈ ಕೊಡು, ಮೇಲೆ ಬರ್ಲಕ್ಕಡ" ಎಂದು ಕೈನೀಡಿದಳು.


**ಅಲಕಾ ಕಟ್ಟೆಮನೆ**

ಬೆಂಗಳೂರಿನ ಸುದ್ದಿಮನೆಯೊಂದರಲ್ಲಿ ಪತ್ರಕರ್ತೆಯಾಗಿ ಕೆಲಕಾಲ ಕೆಲಸ. ನಂತರದ ಕೆಲವು ವರ್ಷಗಳು ಅಮೆರಿಕೆಯಲ್ಲಿ ವಾಸ. ಪ್ರಸ್ತುತ ಮೈಸೂರಿನಲ್ಲಿ ನೆಲೆ. 'ಶಾಲ್ಮಲೆಯ ಹೊನಲಲ್ಲಿ' ಎಂಬ ಕಥಾಸಂಕಲನ ಪ್ರಕಟವಾಗಿದೆ.